# ಮುಸುಕಿದೀ ಮಬ್ಬಿನಲಿ...

ಮಕ್ಕಳು, ಮಹಿಳೆಯರು ಮತ್ತು ಹಿರಿಯ ನಾಗರಿಕರ ಸ್ಥಿತಿಗತಿ ಹೇಗಿದೆ ಎನ್ನುವುದು ಆರೋಗ್ಯಕರ ಸಮಾಜವನ್ನು ಅಳೆಯುವ ಮಾನದಂಡಗಳಲ್ಲೊಂದು. ನಮ್ಮೆಲ್ಲ ಕನಸು ಕನವರಿಕೆಗಳ ವಾರಸುದಾರರು ಎನ್ನುವ ಕಾರಣಕ್ಕಾಗಿ ಮಕ್ಕಳ ಬಗ್ಗೆ ಸಮಾಜ ಯಾವಾಗಲೂ ತೆರೆದ ಕಣ್ಣಾಗಿರುತ್ತದೆ. ಈ ಔದಾರ್ಯವನ್ನು ಮಹಿಳೆಯರು ಹಾಗೂ ಹಿರಿಯ ನಾಗರಿಕರ ಬಗ್ಗೆ ನಿರೀಕ್ಷಿಸುವುದು ಕಷ್ಟ. ಬದುಕಿನ ಸಂಜೆಯಲ್ಲಿರುವ ಹಿರಿಯ ನಾಗರಿಕರಂತೂ ದೈಹಿಕ, ಮಾನಸಿಕ ಹಾಗೂ ಆರ್ಥಿಕ ಕಾರಣಗಳಿಂದಾಗಿ ಅಸಹಾಯಕತೆ ಅನುಭವಿಸುತ್ತಾರೆ. ಆಧುನಿಕ ಸಂದರ್ಭ ಸೃಷ್ಟಿಸಿರುವ ಒತ್ತಡಗಳು ಹಾಗೂ ಅವಿಭಕ್ತ ಕುಟುಂಬದ ಪರಿಕಲ್ಪನೆ ಕ್ಷೀಣಿಸುತ್ತಿರುವುದು ವೃದ್ಧರ ಸಂಕಟಗಳನ್ನು ಹೆಚ್ಚಿಸುತ್ತಿದೆ. ಈ ಗಾಯಕ್ಕೀಗ ಕೊರೊನಾದ ಉಪ್ಪು. ಹಿರಿಯ ನಾಗರಿಕರು ಅನುಭವಿಸುತ್ತಿರುವ ಒಂಟಿತನ, ತವಕ ತಲ್ಲಣಗಳು ಕೊರೊನಾ ಕಾಲಘಟ್ಟದಲ್ಲಿ ಮತ್ತಷ್ಟು ಸ್ಪಷ್ಟವಾಗಿ ಕಾಣಿಸುತ್ತಿವೆ. ಯುವ ತಲೆಮಾರು ತನ್ನ ಓಟದ ವೇಗವನ್ನು ನಿಧಾನಿಸಿ, ಹಿರಿಯರ ಅಗತ್ಯಗಳನ್ನು ಸಾವಧಾನದಿಂದ ಆಲಿಸಬೇಕಾದ ಸಮಯವಿದು.

■ ಕೋಡಿಬೆಟ್ಟು ರಾಜಲಕ್ಷ್ಮಿ